Kerala Gazette No. 31 dated 4th August 2020.

**PART I** **Section iii**

# ಕೇರಳ ಸರಕಾರ

## ಕಾನೂನು (ಶಾಸನ ರಚನೆ-ಇ) ಇಲಾಖೆ

## ಅಧಿಸೂಚನೆ

*2018 ಏಪ್ರಿಲ್ 7,*

ನಂಬ್ರ 25297/ಲೆಗ್. ಇ1/2017/ಕಾನೂನು. *ತಿರುವನಂತಪುರಂ,* *1193 ಮೀನ 24/*

*1940 ಚೈತ್ರ 17.*

2018 ಏಪ್ರಿಲ್ 7ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದಂತಹ ಈ ಕೆಳಗಿನ ಅಧ್ಯಾದೇಶವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗುವುದು.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

*ಕಾನೂನು ಕಾರ್ಯದರ್ಶಿ.*

## 2018ರ 22ನೇ ನಂಬ್ರ ಅಧ್ಯಾದೇಶ

## 2018ರ ಕೇರಳ ಉಚ್ಛ ನ್ಯಾಯಾಲಯ (ತಿದ್ದುಪಡಿ) ಅಧ್ಯಾದೇಶ

ಭಾರತ ಗಣರಾಜ್ಯದ ಅರುವತ್ತೊಂಭತ್ತನೇ ವರ್ಷದಲ್ಲಿ ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದುದು.

1958ರ ಕೇರಳ ಉಚ್ಛ ನ್ಯಾಯಾಲಯ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧ್ಯಾದೇಶ

ಪೀಠಿಕೆ.—2017ರ ಕೇರಳ ಉಚ್ಛ ನ್ಯಾಯಾಲಯ (ತಿದ್ದುಪಡಿ) ಅಧ್ಯಾದೇಶ (2017ರ 30)ವನ್ನು 2017 ಡಿಸೆಂಬರ್ 14ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದುದರಿಂದಲೂ;

2018 ಜನವರಿ 22ನೇ ದಿನಾಂಕದಂದು ಆರಂಭವಾಗಿ 2018 ಫೆಬ್ರವರಿ 7ನೇ ದಿನಾಂಕದಂದು ಮುಕ್ತಾಯಗೊಂಡ ಕೇರಳ ವಿಧಾನಸಭೆಯ ಅಧಿವೇಶನ ಕಾಲದಲ್ಲಿ ಪ್ರಸ್ತುತ ಅಧ್ಯಾದೇಶಕ್ಕೆ ಬದಲಾಗಿ ವಿಧಾನಸಭೆಯ ಒಂದು ಅಧಿನಿಯಮವನ್ನು ತರುವುದಕ್ಕಿರುವ ಒಂದು ಮಸೂದೆಯನ್ನು 14ನೇ ಕೇರಳ ವಿಧಾನಸಭೆಯ 87ನೇ ನಂಬ್ರ ಮಸೂದೆಯಾಗಿ ಪ್ರಕಟಿಸಿದ್ದರೂ, ಅದನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಅಂಗೀಕರಿಸಲು ಸಾಧ್ಯವಾಗದುದರಿಂದಲೂ;

ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಚಾಲ್ತಿಯಲ್ಲಿರಿಸುವುದಕ್ಕಾಗಿ 2018ರ ಕೇರಳ ಉಚ್ಛ ನ್ಯಾಯಾಲಯ (ತಿದ್ದುಪಡಿ) ಅಧ್ಯಾದೇಶ (2018ರ 3)ವನ್ನು 2018 ಫೆಬ್ರವರಿ 12ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದುದರಿಂದಲೂ;

2018 ಫೆಬ್ರವರಿ 26ನೇ ದಿನಾಂಕದಂದು ಆರಂಭವಾಗಿ 2018 ಏಪ್ರಿಲ್ 4ನೇ ದಿನಾಂಕದಂದು ಮುಕ್ತಾಯಗೊಂಡ ಕೇರಳ ವಿಧಾನಸಭೆಯ ಅಧಿವೇಶನ ಕಾಲದಲ್ಲಿ ಪ್ರಸ್ತುತ ಅಧ್ಯಾದೇಶಕ್ಕೆ ಬದಲಾಗಿ ವಿಧಾನಸಭೆಯ ಒಂದು ಅಧಿನಿಯಮವನ್ನು ತರುವುದಕ್ಕಿರುವ ಒಂದು ಮಸೂದೆಯನ್ನು 14ನೇ ಕೇರಳ ವಿಧಾನಸಭೆಯ 113ನೇ ನಂಬ್ರ ಮಸೂದೆಯಾಗಿ ಪ್ರಕಟಿಸಿದ್ದರೂ, ಅದನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಅಂಗೀಕರಿಸಲು ಸಾಧ್ಯವಾಗದುದರಿಂದಲೂ;

ಭಾರತ ಸಂವಿಧಾನದ 213ನೇ ಅನುಚ್ಛೇದದ (2)ನೇ ಖಂಡದ (ಎ) ಉಪ-ಖಂಡದ ಪ್ರಕಾರ, 2018ರ ಕೇರಳ ಉಚ್ಚ ನ್ಯಾಯಾಲಯ (ತಿದ್ದುಪಡಿ) ಅಧ್ಯಾದೇಶ (2018ರ 3)ವು 2018 ಏಪ್ರಿಲ್ 9ನೇ ದಿನಾಂಕದಂದು ಜಾರಿಯಲ್ಲಿಲ್ಲದಾಗುವುದರಿಂದಲೂ;

ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಚಾಲ್ತಿಯಲ್ಲಿರಿಸದಿದ್ದಲ್ಲಿ ತೊಂದರೆಗಳು ಉಂಟಾಗಬಹುದಾದುದರಿಂದಲೂ;

ಕೇರಳ ರಾಜ್ಯ ವಿಧಾನಸಭೆಯು ಅಧಿವೇಶನದಲ್ಲಿಲ್ಲದಿರುವುದರಿಂದಲು ಮತ್ತು ತಾನು ತ್ವರಿತ ಕ್ರಮವನ್ನು ಕೈಗೊಳ್ಳಲು ಅಗತ್ಯವಾದ ಸನ್ನಿವೇಶವು ಅಸ್ತಿತ್ವದಲ್ಲಿದೆಯೆಂದು ಕೇರಳ ರಾಜ್ಯಪಾಲರಿಗೆ ಮನವರಿಕೆಯಾಗಿರುವುದರಿಂದಲೂ;

ಈಗ, ಆದುದರಿಂದ, ಭಾರತ ಸಂವಿಧಾನದ 213ನೇ ಅನುಚ್ಛೇದದ ಖಂಡ (1)ರ ಪ್ರಕಾರ ನೀಡಲ್ಪಟ್ಟ ಅಧಿಕಾರಗಳನ್ನು ವಿನಿಯೋಗಿಸಿ, ಕೇರಳ ರಾಜ್ಯಪಾಲರು ಈ ಕೆಳಗಿನ ಅಧ್ಯಾದೇಶವನ್ನು ಪ್ರಖ್ಯಾಪಿಸಲು ಇಚ್ಛಿಸುವರು:—

1. <u>ಸಣ್ಣ ಹೆಸರು ಮತ್ತು ಪ್ರಾರಂಭ.</u>—(1) ಈ ಅಧ್ಯಾದೇಶವನ್ನು 2018ರ ಕೇರಳ ಉಚ್ಚ ನ್ಯಾಯಾಲಯ (ತಿದ್ದುಪಡಿ) ಅಧ್ಯಾದೇಶವೆಂದು ಕರೆಯಬಹುದು.

(2) ಇದು 2017 ಡಿಸೆಂಬರ್ 15ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. <u>ತಾತ್ಕಾಲಿಕವಾಗಿ ತಿದ್ದುಪಡಿ ಮಾಡಬೇಕಾದ 1959ರ 5ನೇ ಅಧಿನಿಯಮ.</u>—ಈ ಅಧ್ಯಾದೇಶವು ಜಾರಿಯಲ್ಲಿರುವ ಕಾಲಾವಧಿಯಲ್ಲಿ, 1958ರ ಕೇರಳ ಉಚ್ಚ ನ್ಯಾಯಾಲಯ ಅಧಿನಿಯುವ (1959ರ 5) (ಇನ್ನು ಮುಂದೆ ಪ್ರಧಾನ ಅಧಿನಿಯುವುವೆಂದು ಉಲ್ಲೇಖಿಸಲ್ಪಡುವುದು)ಕ್ಕೆ 3ನೇ ವಿಭಾಗದಲ್ಲಿ ಮತ್ತು 4ನೇ ವಿಭಾಗದ ಉಪಬಂಧಗಳಲ್ಲಿ ನಿರ್ದಿಷ್ಟಪಡಿಸಿರುವ ತಿದ್ದುಪಡಿಗಳಿಗೆ ವಿಧೇಯವಾಗಿ ಪ್ರಾಬಲ್ಯವಿರುವುದಾಗಿದೆ.

3. <u>3ನೇ ವಿಭಾಗಕ್ಕಿರುವ ತಿದ್ದುಪಡಿ.</u>—ಪ್ರಧಾನ ಅಧಿನಿಯಮದ 3ನೇ ವಿಭಾಗದ (13)ನೇ ಖಂಡದಲ್ಲಿ,—

(i) ಉಪಖಂಡ (ಬಿ)ಯಲ್ಲಿ, "ಒಂದು ಲಕ್ಷ ರೂಪಾಯಿಗಳು" ಎಂಬ ಪದಗಳ ಬದಲು "ನಲುವತ್ತು ಲಕ್ಷ ರೂಪಾಯಿಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ಉಪ-ಖಂಡ (ಜಿ)ಯ ನಂತರ, ಈ ಕೆಳಗಿನ ಉಪ-ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಎಚ್) ಮೋಟಾರ್ ಆಕ್ಸಿಡೆಂಟ್ಸ್ ಕ್ಲೈಮ್ಸ್ ಟ್ರಿಬ್ಯೂನಲ್ ಹೊರಡಿಸಿದ ಒಂದು ತೀರ್ಪಿನಿಂದ.".

4. ಇತ್ಯರ್ಥವಾಗದ ಮೇಲ್ಮನವಿಗಳು, ವ್ಯಾಜ್ಯಗಳು ಮತ್ತು ಇತರ ವ್ಯವಹರಣೆಗಳಿಗೆ ಸಂಬಂಧಿಸಿದ ವಿಶೇಷ ಉಪಬಂಧ.—ಪ್ರಧಾನ ಅಧಿನಿಯಮದಲ್ಲಿ ಅಥವಾ ತತ್ಕಾಲ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧ್ಯಾದೇಶದ ಪ್ರಕಾರ ತಿದ್ದುಪಡಿ ಮಾಡಲ್ಪಟ್ಟ ಪ್ರಧಾನ ಅಧಿನಿಯಮದ 3ನೇ ವಿಭಾಗದ (13)ನೇ ಖಂಡದ (ಬಿ) ಮತ್ತು (ಎಚ್) ಉಪಖಂಡಗಳ ಉಪಬಂಧಗಳು, ಈ ಅಧ್ಯಾದೇಶದ ಪ್ರಾರಂಭದ ದಿನಾಂಕಕ್ಕಿಂತ ಮೊದಲು ಹೂಡಿದ ಹಾಗೂ ವಿಲೇವಾರಿ ಯಾಗದಂತಹ ಎಲ್ಲಾ ವ್ಯಾಜ್ಯಗಳಿಗೆ, ಮೇಲ್ಮನವಿಗಳಿಗೆ ಮತ್ತು ಇತರ ವ್ಯವಹರಣೆಗಳಿಗೆ ಹಾಗೂ 1988ರ ಮೋಟಾರ್ ವೆಹಿಕಲ್ಸ್ ಆಕ್ಟ್ (1988ರ 59ನೇ ಕೇಂದ್ರ ಅಧಿನಿಯಮ)ನ ಪ್ರಕಾರ, ಆಯಾಯ ವಿಷಯದಂತೆ, ಪರಿಹಾರಕ್ಕಾಗಿ ಸಲ್ಲಿಸಿದ ಅರ್ಜಿಗಳಿಗೆ ಅನ್ವಯಿಸುವುದಾಗಿದೆ ಮತ್ತು ಪ್ರಸ್ತುತ ದಿನಾಂಕದಂದು ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ಇತ್ಯರ್ಥವಾಗದೆ ಇರುವಂತಹ ವ್ಯಾಜ್ಯಗಳ ಅಥವಾ ಇತರ ವ್ಯವಹರಣೆಗಳ ವಿಷಯದ ಮೊತ್ತವು ಅಥವಾ ಮೌಲ್ಯವು ನಲುವತ್ತು ಲಕ್ಷ ರೂಪಾಯಿಗಿಂತ ಮೀರದ ಎಲ್ಲಾ ಮೇಲ್ಮನವಿಗಳು ಹಾಗೂ ಮೋಟಾರ್ ಆಕ್ಸಿಡೆಂಟ್ಸ್ ಕ್ಲೈಮ್ಸ್ ಟ್ರಿಬ್ಯೂನಲ್ ಹೊರಡಿಸಿದ ತೀರ್ಪುಗಳ ವಿರುದ್ಧ ಸಲ್ಲಿಸಿದಂತಹ ಎಲ್ಲಾ ಮೇಲ್ಮನವಿಗಳು ಏಕಪೀಠಕ್ಕೆ ಹಸ್ತಾಂತರಿಸತಕ್ಕದ್ದು ಮತ್ತು ಏಕಪೀಠವು ಇತ್ಯರ್ಥ ಮಾಡತಕ್ಕದ್ದು:

ಆದರೆ ಪ್ರಸ್ತುತ ಉಪಬಂಧವು ಪ್ರಧಾನ ಅಧಿನಿಯಮದ 5ನೇ ವಿಭಾಗದ ಪ್ರಕಾರ ವಿಭಾಗೀಯ ಪೀಠದ ಮುಂದೆ ಇತ್ಯರ್ಥವಾಗದೆ ಇರುವಂತಹ ಮೇಲ್ಮನವಿಗಳಿಗೆ ಅನ್ವಯಿಸುವುದಿಲ್ಲ.

5. ರದ್ದತಿ ಮತ್ತು ರಕ್ಷಣೆ.—(1) 2018ರ ಕೇರಳ ಉಚ್ಚ ನ್ಯಾಯಾಲಯ (ತಿದ್ದುಪಡಿ) ಅಧ್ಯಾದೇಶ (2018ರ 3)ವು ಈ ಮೂಲಕ ರದ್ದುಗೊಂಡಿರುವುದು.

(2) ಅಂತಹ ರದ್ದತಿಯಲ್ಲಿ ಏನೇ ಒಳಗೊಂಡಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಅಥವಾ ಮಾಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕಾರ್ಯ ಅಥವಾ ಕೈಗೊಂಡ ಅಥವಾ ಕೈಗೊಂಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕ್ರಮವು ಈ ಅಧ್ಯಾದೇಶದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

**ಪಿ. ಸದಾಶಿವಂ,**

ರಾಜ್ಯಪಾಲರು.